ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ಸಂಸ್ಥೆ ಸಭಾಧ್ಯಕ್ಷರು

ಪತ್ರಿಕೆಯ ಹೆಸರು : NAME OF THE NEWS PAPER : ಸಂಯುಕ್ತ ಕರ್ನಾಟಕ ದಿನಾಂಕ : DATE 20/07/2019

'ಹೊಟ್ಟೆಗೆ ಏನು ತಿಂತಾ ಇದ್ದೀರಿ...'

ಟೀಕಿಸುವವರು ನನ್ನ ಮನೆಗೆ ಬಂದು ನೋಡಲಿ

ನಿಮ್ಮ ಸ್ವಾರ್ಥಕ್ಕಾಗಿ ಸಾಯಿಸಲು ಹೊರಟಿದ್ದೀರಿ

ಇರೋದೆಲ್ಲಾ ಬಿಚ್ಚಿಡಿ, ಹೊಟ್ಟೆಯೆಲ್ಲಾ ಸ್ವಚ್ಛ ಆಗಲಿ

ನಾನು ಕೆಂಡದ ಮೇಲೆ ನಿಂತಿದ್ದೇನೆ

ವಿಧಾನಸಭೆ: ನನ್ನ ಬಗ್ಗೆ ಮನಸ್ಸಿಗೆ ಬಂದಂತೆ ಮಾತನಾಡುವರು ಹೊಟ್ಟೆಗೆ ಏನು ತಿನ್ನುತ್ತಾರೆ. ಅಂತವರು ತಮ್ಮ ಹಿನ್ನೆಲೆಯನ್ನು ನೋಡಿಕೊಳ್ಳಲಿ ಎಂದು ಸ್ಪೀಕರ್ ರಮೇಶ್‌ಕುಮಾರ್ ಟೀಕಾಕಾರರಿಗೆ ತಿರುಗೇಟು ನೀಡಿದ್ದಾರೆ. ಸಂ ಕ 20-7-19

ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ವಿಶ್ವಾಸಮತ ಕೋರಿದ ಸಂದರ್ಭದಲ್ಲಿ ನಡೆದ ಶಾಸಕರ ಖರೀದಿ ಕುರಿತ ಚರ್ಚೆಯಲ್ಲಿ ಮಧ್ಯಪ್ರವೇಶಿಸಿ ಮಾತನಾಡಿದ ಸ್ಪೀಕರ್ ಅಧಿವೇಶನವನ್ನು ಉದ್ದೇಶಪೂರ್ವಕವಾಗಿ ವಿಳಂಬ ಮಾಡುತ್ತಿರುವುದಾಗಿ ತಮ್ಮ ಬಗ್ಗೆ ಟೀಕೆ ಮಾಡಿದವರ ವಿರುದ್ಧ ನೊಂದು ನುಡಿದರು. ಭಾವ ತೀವ್ರತೆಯಿಂದಲೂ ಪ್ರತಿಕ್ರಿಯಿಸಿದರು. ನನ್ನ ಟೀಕಿಸುವವರು ನನ್ನ ಮನೆಗೆ ಬಂದು ನೋಡಲಿ. ಒಂದು ಬೋರ್ಡ್ ಹಾಕಿಸಿಲ್ಲ. ನನ್ನ ಕಾರಿಗೆ ಬೋರ್ಡ್ ಹಾಕಿಸಿಲ್ಲ. ನೀವು ನಿಮ್ಮ ಸ್ವಾರ್ಥಕ್ಕಾಗಿ ಗೌರವವಾಗಿ ಬದುಕುವವರನ್ನು ಸಾಯಿಸಲು ಹೊರಟಿದ್ದೀರಲ್ಲ?. ಹೀಗೆ ಮಾಡಿದರೆ ಪ್ರಾಮಾಣಿಕವಾಗಿ ಇರೋರೆಲ್ಲ ಎಲ್ಲಿಗೆ ಹೋಗಬೇಕು. ಇನ್ನು ಬಿಚ್ಚಿ, ಹೊಟ್ಟೇಲಿ ಇರೋದೆಲ್ಲ ಬಿಚ್ಚಿಡಿ. ಎಲ್ಲಾ ಹೊರಗೆ ಬರಲಿ. ಯಾರ್ಯಾರು ಎಷ್ಟೆಷ್ಟು ಬೆತ್ತಲೆ ಆಗ್ತಾರೋ ಆಗಲಿ. ಶಾಂತವೇರಿ ಗೋಪಾಲಗೌಡರು ಬಂದಿದ್ದು ಇದೇ ಅಸೆಂಬ್ಲಿಗಾ ಎಂದು ಜನ ಯೋಚಿಸಲಿ. ಅವರನ್ನು ಬಿಟ್ಟು ಇತಿಹಾಸ ಬರೆಯಲು ಆಗೋಲ್ಲ. ಆದರೆ ಅವರು ಸಿಎಂ ಆಗಲಿಲ್ಲ. ಮಂತ್ರಿ ಆಗಲಿಲ್ಲ ಎಂದು ಹೇಳಿದರು.

ಸಭೆಯ ಆರಂಭದಲ್ಲಿಯೇ ತಮ್ಮ ಬಗ್ಗೆ ಕೇಳಿ ಬರುತ್ತಿರುವ ಟೀಕೆಗೆ ಉತ್ತರಿಸಿದ ಸ್ಪೀಕರ್, ಪರೋಕ್ಷವಾಗಿ ಮತದಾನಕ್ಕೆ ನಾನು ವಿಳಂಬ ಮಾಡುತ್ತಿದ್ದೇನೆ. ಪಕ್ಷಪಾತ ಮಾಡುತ್ತಿದ್ದೇನೆ ಎಂಬ ಟೀಕೆ ಮಾಡುತ್ತಾರೆ. ಅಂತವರ ಬಗ್ಗೆ ನನಗೆ ಅನುಕಂಪ ಇದೆ. ಒಬ್ಬ ಮನುಷ್ಯನ ಚಾರಿತ್ರ್ಯವಧೆ ಬಹಳ ಸುಲಭ. ನನಗೆ ಪಕ್ಷಪಾತಿ ಆಗುವ ಸ್ಥಿತಿ ಬಂದಿಲ್ಲ. ಒಂದು ದಿನ ಕಲಾಪ ಮುಂದಕ್ಕೆ ಹಾಕುವುದರಲ್ಲಿ ನನ್ನ ಹಿತಾಸಕ್ತಿ ಏನೂ ಇಲ್ಲ. ಇಂತಹ ಲಕ್ಷಾಂತರ ಜನ ನನ್ನ ಬಗ್ಗೆ ಮಾತನಾಡಿದರೂ ಅದನ್ನು ಮೆಟ್ಟಿ ನಿಲ್ಲುವ ತಾಕತ್ತನ್ನು ನನಗೆ ನನ್ನ ತಂದೆ ತಾಯಿ, ಕ್ಷೇತ್ರದ ಜನ ಕೊಟ್ಟಿದ್ದಾರೆ. ನನ್ನ ಚಾರಿತ್ರ್ಯವಧೆ ಮಾಡುವವರು ತಮ್ಮ ಹಿನ್ನೆಲೆ ನೋಡಿಕೊಳ್ಳಲಿ. ನಾನು ಆಡಿರುವ ಮಾತು, ಕೊಡುವ ತೀರ್ಪು ಇತಿಹಾಸದಲ್ಲಿ ಉಳಿಯಬೇಕು ಎಂದು ಸ್ಪೀಕರ್ ಹೇಳಿದರು. ನಾನು ಕೆಂಡದ ಮೇಲೆ ನಿಂತಿದ್ದೇನೆ. ಆದರೆ ನಿಯಮವಳಿ ಪ್ರಕಾರ ಕೆಲಸ ಮಾಡುತ್ತೇನೆ. ನಾನು ಯಾರ ಒತ್ತಡಕ್ಕೂ ಕೆಲಸ ಮಾಡುವುದಿಲ್ಲ. ನನ್ನ ಮೇಲೆ ಒತ್ತಡ ಹೇರುವ ಶಕ್ತಿ ಜಗತ್ತಿನಲ್ಲಿ ಇಲ್ಲ ಎಂದು ಸ್ಪೀಕರ್ ಸಾಂದರ್ಭಿಕವಾಗಿ ಹೇಳಿದರು.

ಶ್ರೀಮಂತಗೌಡ ಸುರಕ್ಷಿತ

ಬೆಂಗಳೂರು, : ನಾನು ಬಿಜೆಪಿಯವರಿಂದ ಅಪಹರಣವಾಗಿಲ್ಲ ಮುಂಬೈನಲ್ಲಿ ಚಿಕಿತ್ಸೆ ಪಡೆಯುತ್ತಿದ್ದೇನೆ ಎಂದು ಕಾಗವಾಡ ಕ್ಷೇತ್ರದ ಶಾಸಕ ಶ್ರೀಮಂತ ಪಾಟೀಲ ಸ್ಪೀಕರ್‌ಗೆ ಈ ಮೇಲ್ ಮುಖಾಂತರ ಕಳುಹಿಸಿದ ಸಂದೇಶವನ್ನು ವಿಧಾನಸಭಾಧ್ಯಕ್ಷರು ಕಲಾಪದ ಮಧ್ಯೆ ಓದಿ ಹೇಳಿದರು. "ಪ್ರಕೃತಿ ರೆಸಾರ್ಟ್‌ನಲ್ಲಿದ್ದ ನಾನು ತುರ್ತು ಕೆಲಸದ ನಿಮಿತ್ತ ಚೆನ್ನೈಗೆ ತೆರಳಿದೆ. ಕೆಲಸ ಮುಗಿಸಿ ಮರಳಿ ಬರುವಾಗ ನಾನು ಅನಾರೋಗ್ಯಕ್ಕೆ ತುತ್ತಾದೆ. ಈ ವೇಳೆ ನಮ್ಮ ವೈದ್ಯರಿಗೆ ಕರೆ ಮಾಡಿದೆ. ಅವರು ಮುಂಬೈಗೆ ಬರುವಂತೆ ತಿಳಿಸಿದರು. ನಾನೇನದರೂ ಪೂರ್ವಯೋಚಿತವಾಗಿ ಮುಂಬೈಗೆ ತೆರಳಿದ್ದರೆ, ನನ್ನ ಲೆಟರ್ ಹೆಡ್‌ನಲ್ಲಿಯೇ ನಿಮಗೆ ಪತ್ರಬರೆಯುತ್ತಿದ್ದೆ. ನನ್ನನ್ನು ಯಾವುದೇ ಬಿಜೆಪಿ ನಾಯಕರು ಅಪಹರಣ ಮಾಡಿಲ್ಲ. ಅನಾರೋಗ್ಯದ ಹಿನ್ನೆಲೆ ಸದನಕ್ಕೆ ಗೈರಾಗಿದ್ದೇನೆ" ಸದನದಲ್ಲಿ ಶ್ರೀಮಂತ ಪಾಟೀಲ್ ಗೈರಾಗಲು ಬಿಜೆಪಿ ಕಾರಣ. ಇದಕ್ಕೆ ಬೇಕಾದ ಸಾಕ್ಷ್ಯಗಳನ್ನು ಕೂಡ ನಾನು ನೀಡಬಲ್ಲೆ ಎಂದು ಗುರುವಾರ ಸದನದಲ್ಲಿ ಸಚಿವ ಡಿಕೆ ಶಿವಕುಮಾರ್ ಆರೋಪಿಸಿದ್ದರು. ಅಲ್ಲದೇ ನಮ್ಮ ಶಾಸಕರನ್ನು ರಕ್ಷಣೆ ಮಾಡಬೇಕು ಎಂದು ಮನವಿ ಮಾಡಿದ್ದರು.

6